# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 975(1336)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಮಾನ್ಯ ಕಾರ್ಮಿಕ ಸಚಿವರು

ವಿಷಯ : ಶೌಚ Manual Scavanging ನಿಷೇಧ ಕಾಯ್ದೆ 2013 ಜಾರಿಯಲ್ಲಿನ ವಿಫಲತೆ ಬಗ್ಗೆ

(ಅ) ರಾಜ್ಯದಲ್ಲಿ ಶೌಚಗುಂಡಿಗಳನ್ನು (ಮ್ಯಾನ್ ಹೋಲ್) ಕಾರ್ಮಿಕರೇ ಖುದ್ದು ಗುಂಡಿಗಳಲ್ಲಿ ಇಳಿದು ಸ್ವಚ್ಛಗೊಳಿಸುವ ಕಾರ್ಯ ಮುಂದುವರೆದಿರು ವುದನ್ನು ಸರ್ಕಾರ ಗಂಭೀರವಾಗಿ ಗಮನಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಇರುವ ಕಾಯ್ದೆಯು ನಿರುಪಯೋಗಿ ಆಗಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ಮಾಹಿತಿ ಒದಗಿಸುವುದು)

(ಆ) ಸದರಿ ಕಾಯ್ದೆ ಜಾರಿಯಾದ ನಂತರದಲ್ಲಿ ಈ ಶೌಚಗುಂಡಿ ಸ್ವಚ್ಛತೆ ಸಮಯದಲ್ಲಿ ಪ್ರಾಣ ಕಳೆದುಕೊಂಡವರ ಮಾಹಿತಿ ಸರ್ಕಾರಕ್ಕೆ ಇದೆಯೇ; (ಜಿಲ್ಲಾವಾರು ವರ್ಷವಾರು ಮಾಹಿತಿ ಒದಗಿಸುವುದು)

(ಇ) ಇದುವರೆವಿಗೆ ಪ್ರಾಣ ಕಳೆದುಕೊಂಡವರ ಬಗೆಗಿನ ಕಾರಣಗಳನ್ನು ಗುರುತಿಸಲಾಗಿದೆಯೇ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಕಾರ್ಮಿಕರನ್ನು ಈ ಶೌಚಗುಂಡಿಗಳಿಗೆ ಇಳಿಸುವ ಬದಲಾಗಿ ಯಂತ್ರಗಳನ್ನು ಬಳಸುವ ನಿಟ್ಟಿನಲ್ಲಿ ಇರುವ ತೊಡಕುಗಳನ್ನು ಸರ್ಕಾರ ಗುರುತಿಸಿದೆಯೇ; ಹಾಗಿದ್ದಲ್ಲಿ, ಪರಿಹಾರ ರೂಪದ ಯಾವ ಯೋಜನೆ ಸರ್ಕಾರದ ಮುಂದಿದೆ;

(ಉ) ಇತ್ತೀಚೆಗೆ (28-01-2021) ಕಲಬುರಗಿಯಲ್ಲಿ ಈ ರೀತಿಯ ಶೌಚಗುಂಡಿಗಳನ್ನು ಸ್ವಚ್ಛಗೊಳಿಸುವಾಗ ಮರಣ ಹೊಂದಿದ ಇಬ್ಬರೂ ಸೇರಿದಂತೆ, ಈ ದುರಂತಗಳಿಗೆ ಕಾರಣಕರ್ತರಾದ, ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳು ಏನು? (ಸಂಪೂರ್ಣ ಮಾಹಿತಿ ಒದಗಿಸುವುದು)